**ಎಂ.ವಿ.ಸಿ. 992/2023,                ಪಿ.ಡಬ್ಲ್ಯೂ-1            ಹೆಸರುಃ ಮಂಜುನಾಥ**

**ದಿಃ10-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಎಸ್.ವಿ. ವಕೀಲರಿಂದಃ**

ನಾನು ಬಿ.ಕಾಂ. ವ್ಯಾಸಂಗ ಮಾಡಿದ್ದೇನೆ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಸಲ್ಲಿಸಿರುವ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿನ ವಿಚಾರಗಳ ಕುರಿತು ನಾನು ಓದಿಲ್ಲ, ಹಾಗಾಗಿ ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕ 12.05.1965 ಇರುತ್ತದೆ. ಅಪಘಾತದ ಸಮಯದಲ್ಲಿ ನನಗೆ 58 ವರ್ಷ ವಯಸ್ಸಾಗಿತ್ತು. ಅಪಘಾತದ ಸಮಯದಲ್ಲಿ ನಾನು ಮತ್ತು ನನ್ನ ಪತ್ನಿಯಾದ ಪಿಡಬ್ಲ್ಯೂ.2 ರವರು ನನಗೆ ಸೇರಿದ ಮೋಟಾರ್ ಸೈಕಲ್ ನಂ.ಕೆಎ-16-ಇ.ಎಲ್.-5166 ರಲ್ಲಿ ಹೋಗುತ್ತಿದ್ದೆವು. ನಾನು ಗೃಹಪ್ರವೇಶಕ್ಕೆ ಹೋಗಲು ಮತ್ತಿಗಟ್ಟ ಗ್ರಾಮದ ಮಾರ್ಗವಾಗಿ ತಾಳ್ಯಕ್ಕೆ ಹೋಗುತ್ತಿದ್ದೆನು. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್‌ನ್ನು ಹಾಕಿದ್ದೆನು. ಪಿ.ಡಬ್ಲ್ಯೂ.2 ರವರು ಹೆಲ್ಮೆಟ್‌ನ್ನು ಹಾಕಿರಲಿಲ್ಲ. ಬೈಕಿನಲ್ಲಿ ಹೋಗುವಾಗ ಪಿ.ಡಬ್ಲ್ಯೂ.2 ರವರು ಸಹ ಹೆಲ್ಮೆಟ್ ಹಾಕಬೇಕು ಎಂದರೆ ಸರಿ.

2. ನನ್ನ ಬಳಿ ಚಾಲನಾ ಪರವಾನಗಿ ಇತ್ತು. ಸದರಿ ಚಾಲನಾ ಪರವಾನಗಿ ಅಪಘಾತದ ಸಮಯದಲ್ಲಿ ಕಳೆದುಹೋಗಿರುತ್ತದೆ. ಅಪಘಾತದ ನಂತರ ನನ್ನ ಬೈಕು ಸಂಪೂರ್ಣವಾಗಿ ಜಖಂಗೊಂಡಿದ್ದು, ನನಗೆ ಸಂಬಂಧಿಸಿದ ಚಾಲನಾ ಪರವಾನಗಿ ಸಿಗಲಿಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್‌ನ್ನು ಹಾಕಿರಲಿಲ್ಲ, ಆದಾಗ್ಯೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಚಾಲನಾ ಪರವಾನಗಿ ಇಲ್ಲ, ಆದಾಗ್ಯೂ, ಚಾಲನಾ ಪರವಾನಗಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಮತ್ತಿಗಟ್ಟ ತಾಳ್ಯ ಮಧ್ಯೆ ಕೆರೆ ಬಳಿ ಆಗಿರುತ್ತದೆ.

3. ತಾಳ್ಯ ಕಡೆಯಿಂದ ಎದುರಿನಿಂದ ಮತ್ತೊಂದು ಬೈಕು ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿತ್ತು. ಎದುರಿನಿಂದ ಬರುತ್ತಿದ್ದ ಬೈಕಿನ ಚಾಲಕ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಬರುತ್ತಿದ್ದನು. ಸಂಚಾರಿ ನಿಯಮದ ಪ್ರಕಾರ ವಾಹನವನ್ನು ಚಾಲನೆ ಮಾಡುವಾಗ ಮೊಬೈಲ್‌ನ್ನು ಬಳಸುವಂತಿಲ್ಲ ಎಂದರೆ ಸರಿ. ಎದುರಿನಿಂದ ಬರುತ್ತಿದ್ದ ಬೈಕಿನ ಚಾಲಕ ನಿಧಾನವಾಗಿ ಬರುತ್ತಿದ್ದ ಎಂದರೆ ಸಾಕ್ಷಿ ನಿಧಾನವಾಗಿ ಬರುತ್ತಿದ್ದ, ಆದರೆ ಫೋನಿನಲ್ಲಿ ಮಾತನಾಡಿಕೊಂಡು ಬಂದು ಡಿಕ್ಕಿಪಡಿಸಿದ ಎಂದು ಹೇಳುತ್ತಾರೆ.

4. ಅಪಘಾತದ ಕುರಿತು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಗೆ ನಾನೇ ದೂರನ್ನು ನೀಡಿರುತ್ತೇನೆ. ಅಪಘಾತ ದಿನಾಂಕ 27.01.2023 ರಂದು ಆಗಿರುತ್ತದೆ ಎಂದರೆ ಸರಿ. ನಾನು ದೂರನ್ನು 17 ದಿನಗಳ ವಿಳಂಬವಾಗಿ ದಿನಾಂಕ 14.02.2023 ರಂದು ನೀಡಿರುತ್ತೇನೆ ಎಂದರೆ ಸರಿ. 1 ನೇ ಎದುರುದಾರರು ಮುಖ ಪರಿಚಯ ಇದ್ದಾರೆ. ನನ್ನ ತಪ್ಪಿನಿಂದ ಅಪಘಾತ ಆಗಿದ್ದು, ಪರಿಹಾರ ಬರುವುದಿಲ್ಲ ಎಂಬ ಕಾರಣದಿಂದ 1 ನೇ ಎದುರುದಾರರೊಂದಿಗೆ ಷರೀಕಾಗಿ 17 ದಿನಗಳ ವಿಳಂಬವಾಗಿ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣ ಪಟ್ಟಿಯ ಕುರಿತು ಮಾಹಿತಿ ಇದೆ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರು ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಎಂದು ಆರೋಪಣೆಯನ್ನು ಮಾಡಿರುತ್ತಾರೆ ಎಂದರೆ ಸರಿ. 1 ನೇ ಎದುರುದಾರರು ಚಾಲನಾ ಪರವಾನಗಿ ಹೊಂದಿಲ್ಲದೆ ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಬಂದು ಡಿಕ್ಕಿಪಡಿಸಿರುವ ಕಾರಣ 1 ನೇ ಎದುರುದಾರರೆ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

5. ಅಪಘಾತದಲ್ಲಿ ನನ್ನ ಎಡಮೊಣಕಾಲಿಗೆ ಮತ್ತು ಸೊಂಟಕ್ಕೆ ಪೆಟ್ಟಾಗಿತ್ತು. ನನಗೆ ಅಪಘಾತದಲ್ಲಿ ಪೆಟ್ಟಾಗಿದ್ದು, ಯಾವುದೇ ಮೂಳೆ ಮುರಿತ ಆಗಿಲ್ಲ, ಹಾಗೂ ಯಾವುದೆ ಸರ್ಜರಿ ಮಾಡಿಲ್ಲ ಎಂದರೆ ಸರಿ. ಆದಾಗ್ಯೂ ಹೆಚ್ಚಿನ ಪರಿಹಾರವನ್ನು ಪಡೆಯಲು ದಾಖಲಾತಿಗಳನ್ನು ಸೃಷ್ಠಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ